

ಸೈಗಾನ್‌ನಲ್ಲಿ 76 ರೂ ಪೌಲ್ ಬ್ಲಾಂಚಿ ರಸ್ತೆಯಲ್ಲಿದ್ದ ಇಂಡಿಯನ್ ಇಂಡಿಪೆಂಡೆನ್ಸ್ ಲೀಗ್ ಕೇಂದ್ರ ಕಚೇರಿಯ ಮುಂದೆ ಲಿಯಾನ್ ಪ್ರೌಚಂಡಿ ಅವರನ್ನು ಮಾತನಾಡಿಸುತ್ತಿರುವ ನೇತಾಜಿ



### ನೇತಾಜಿ ವಾರ

1945ರ ಜುಲೈ 4–11ರವರೆಗೆ 'ನೇತಾಜಿ ವಾರ'ವೆಂದು ಸೈಗಾನ್ ಸೇರಿದಂತೆ ಇಂಡೊ–ಚೀನಾ, ಪೂರ್ವ ಏಷಿಯಾ ದೇಶಗಳಲ್ಲಿ ಆಚರಣೆ ಮಾಡಲಾಯಿತು. ಸೈಗಾನ್‌ನ ಭಾರತೀಯರೆಲ್ಲರ ಮನೆಗಳ ಮೇಲೆ ಭಾರತದ, ಜಪಾನಿ ಮತ್ತು ವಿಯೆಟ್ನಾಮೀ (ವಿಯೆಟ್ ಮಿನ್) ಧ್ವಜಗಳನ್ನು ಹಾರಿಸಲಾಯಿತು. ಶಾಲಾ ಮಕ್ಕಳಿಗೆ ಸಿಹಿ ಹಂಚಲಾಯಿತು. ಹಲವಾರು ಸಭೆಗಳು ನಡೆದವು. ನೇತಾಜಿ ಅವರ ಭಾವಚಿತ್ರಕ್ಕೆ ಹಾರ ಹಾಕಿ, ಕಾರಿನ ಮೇಲಿರಿಸಿ, ಬೃಹತ್ ಮೆರವಣಿಗೆ ಆಯೋಜಿಸಲಾಯಿತು.

ಸ್ವತಂತ್ರ ಭಾರತದ ಹಂಗಾಮಿ ಸರ್ಕಾರದ ದಿನಾಚರಣೆಯನ್ನು ಸೈಗಾನ್‌ನ ಭಾರತೀಯರು 1945ರ ಜುಲೈ 21ರಂದು ಆಚರಿಸಿದರು. ಅಂಗಡಿ ಹಾಗೂ ತಮ್ಮ ಮನೆಗಳ ಮೇಲೆ ಭಾರತದ ಧ್ವಜವನ್ನು ಹಾರಿಸಿದರು. ಮಸೀದಿಯಲ್ಲಿ ವಿಶೇಷ ಪ್ರಾರ್ಥನೆಯನ್ನು ಏರ್ಪಡಿಸಿದ್ದರು. ಬೋಸ್ ಮಲಯಾದಲ್ಲಿದ್ದಾಗ, 1945ರ ಆಗಸ್ಟ್ 6 ಮತ್ತು 9ರಂದು ಹಿರೋಷಿಮಾ ಮತ್ತು ನಾಗಸಾಕಿಗಳ ಮೇಲೆ ಅಣುಬಾಂಬ್ ದಾಳಿ ನಡೆದ ವಿಚಾರ ತಿಳಿಯಿತು. ಅದರ ಬೆನ್ನ ಹಿಂದೆಯೇ ಜಪಾನ್ ಮೇಲೆ ರಷ್ಯಾ ಯುದ್ಧ ಘೋಷಿಸಿತು. ಸಿಂಗಪುರದ ಇಂಡಿಯನ್ ಇಂಡಿಪೆಂಡೆನ್ಸ್ ಲೀಗ್ ಪ್ರಧಾನ ಕಾರ್ಯದರ್ಶಿ ಡಾ. ಲಕ್ಷ್ಮಯ್ಯ ಮತ್ತು ಸದಸ್ಯ ಗಣಪತಿ ಬಂಧಿತರಾದ ವಿಚಾರ ಬೋಸ್ ಅವರಿಗೆ ತಿಳಿಯಿತು. ಆಗಸ್ಟ್ 15ರಂದು ಜಪಾನ್ ಶರಣಾಯಿತು. ಇನ್ನು ಜಪಾನೀಯರ ಬೆಂಬಲ ನಿರೀಕ್ಷಿಸುವಂತಿರಲಿಲ್ಲ.

1945ರ ಆಗಸ್ಟ್ 16ರಂದು ಬೋಸ್, ಸಿಂಗಪುರ ಬಿಟ್ಟು ಬ್ಯಾಂಕಾಕ್‌ಗೆ ಹೋದರು. ಅವರೊಂದಿಗೆ ಅಪ್ಪಾದುರೈ ಅಯ್ಯರ್, ಕರ್ನಲ್ ಹಬೀಬುರ್ ರೆಹಮಾನ್, ಕರ್ನಲ್ ಪ್ರೀತಮ್ ಸಿಂಗ್, ಅಬಿದ್ ಹಸನ್ ಮತ್ತು ಹಿಕಾರಿ ಕಿಕಾನ್‌ನ ಜಪಾನಿ ಅಧಿಕಾರಿ ನೆಗಿಶಿ ಜೊತೆಗಿದ್ದರು. ಹೊರಡುವ ಮುಂಚೆ ಸೈನ್ಯದ ಎಲ್ಲ ದಾಖಲೆಗಳನ್ನು ನಾಶಪಡಿಸುವಂತೆ ಬೋಸ್ ಸೂಚಿಸಿದ್ದರು.

ಬ್ಯಾಂಕಾಕ್‌ನಲ್ಲಿ ಜಪಾನಿ ಜನರಲ್ ಇಸೋಡಾ, ಹಚಿಯಾ ಮತ್ತು ಕರ್ನಲ್ ಕಗವಾರೊಂದಿಗೆ ಬೋಸ್ ಚರ್ಚಿಸಿದರು. ಅಲ್ಲಿನ ಚರ್ಚೆಯಂತೆ ಬೋಸ್, ಸೈಗಾನ್‌ನಲ್ಲಿನ ಜಪಾನಿ ಮುಖ್ಯಕಚೇರಿಯಲ್ಲಿ ಫೀಲ್ಡ್ ಮಾರ್ಷಲ್ ಕೌಂಟ್ ತೆರೌಚಿ ಅವರೊಂದಿಗೆ ಮುಂದಿನ ನಡೆಯ ಬಗ್ಗೆ ತೀರ್ಮಾನ ತೆಗೆದುಕೊಳ್ಳಲು ಸೈಗಾನ್‌ಗೆ ಹೊರಟರು.

### ಆಗಸ್ಟ್ 17 - ಕಡೆಯ ಭೇಟಿ

ಮಿಲಿಟರಿ ದಿರಿಸಿನಲ್ಲಿ ವಿಮಾನದಿಂದ ಇಳಿಯುತ್ತಾ ಸೆಲ್ಯೂಟ್ ಮಾಡುತ್ತಿರುವ ಬೋಸ್ ಅವರ ಚಿತ್ರವಿದೆ. ಇದು ನೇತಾಜಿ 1945ರ ಆಗಸ್ಟ್ 17ರಂದು ಸೈಗಾನ್‌ಗೆ ಬಂದಾಗ ಕ್ಲಿಕ್ಕಿಸಿರುವ